# ಎನ್ನೆಂಸಿ: ಲೇಖನಿ ಹಿಡಿವ ಕೈಯಲ್ಲಿ ನೇಜಿ ಹಿಡಿದ ರೆಡ್‌ಕ್ರಾಸ್ ವಿದ್ಯಾರ್ಥಿಗಳು

ಕೃಷಿ ಮತ್ತು ಮನುಷ್ಯನ ನಡುವೆ ಅವಿನಾಭಾವ ಸಂಬಂಧವಿದೆ, ಶಾಲಾ ಕಾಲೇಜು ಪ್ರಾರಂಭವಾಯಿತೆಂದರೆ ವಿದ್ಯಾರ್ಥಿಗಳದ್ದು ನಾಲ್ಕು ಗೋಡೆಗಳ ನಡುವೆ ಪುಸ್ತಕ ಪೆನ್ನುಗಳೊಂದಿಗೆ ಯಾಂತ್ರಿಕ ಬದುಕು. ಇಷ್ಟೆಲ್ಲದರ ಮಧ್ಯೆ ರೈತನ ಜೀವನವನ್ನು ಪರಿಚಯಿಸುವ ನಿಟ್ಟಿನಲ್ಲಿ ಸುಳ್ಯದ ನೆಹರೂ ಮೆಮೋರಿಯಲ್ ಕಾಲೇಜಿನ ಯುವ ರೆಡ್‌ಕ್ರಾಸ್ ಘಟಕವು ಪೆರಾಜೆಯ ರೈ ಫಾರ್ಮ್‌ನಲ್ಲಿ ಭತ್ತ ನಾಟಿ ಮಾಹಿತಿ ಮತ್ತು ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ಇತ್ತೀಚೆಗೆ ಹಮ್ಮಿಕೊಂಡಿತ್ತು. ಕಳೆದ ನಾಲ್ಕು ವರ್ಷದಿಂದ ಸತತವಾಗಿ ಭತ್ತ ನಾಟಿ ಮಾಹಿತಿ ಮತ್ತು ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ಕಾರ್ಯಕ್ರಮಾಧಿಕಾರಿ ಡಾ. ಅನುರಾಧಾ ಕುರುಂಜಿಯವರ ನೇತೃತ್ವದಲ್ಲಿ ಹಮ್ಮಿಕೊಳ್ಳುತ್ತಿದ್ದು ಯುವ ರೆಡ್‌ಕ್ರಾಸ್‌ನ ಸುಮಾರು 50 ಸ್ವಯಂ ಸೇವಕರು ಗದ್ದೆಯಲ್ಲಿ ಕುಣಿದು ನೇಜಿ ನೆಟ್ಟು ಸಂಭ್ರಮಿಸಿದರು.

ಆರಂಭದಲ್ಲಿ ನಡೆದ ಸಭಾ ಕಾರ್ಯಕ್ರಮವನ್ನು ಪ್ರಗತಿಪರ ಕೃಷಿಕ ಪಿ ಬಿ ಪ್ರಭಾಕರ ರೈ ಯವರು ಉದ್ಘಾಟಿಸಿ, ಕೃಷಿ ಮಹತ್ವದ ಕುರಿತು ಮಾಹಿತಿ ನೀಡುತ್ತಾ, ಯಾವುದೇ ಕೃಷಿ ಲಾಭದಾಯಕವಲ್ಲ, ಲಾಭದಾಯಕವಾಗಬೇಕಾದರೆ ಶ್ರಮವಹಿಸಬೇಕು. ಅಪ್ಪ ಅಮ್ಮನನ್ನು ಪ್ರೀತಿಸಿದಷ್ಟೇ ಕೃಷಿಯನ್ನೂ ಪ್ರೀತಿಸಿ. ರಬ್ಬರ್ ಬೆಳೆ ಆರ್ಥಿಕ ಸ್ಥಿತಿ ಹೆಚ್ಚಿಸಿದರೆ ಹೊಟ್ಟೆ ತುಂಬಲು ಭತ್ತ ಬೇಕೇ ಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ. ಕೆ ಗಿರಿಧರ ಗೌಡ ಮಾತನಾಡಿ, ಇಂದಿನ ದಿನದಲ್ಲಿ ನಮಗೆ ಬೇಕಾದನ್ನು ನಾವೇ ಬೆಳೆಯದೆ ಪರಾವಲಂಬಿಯಾಗಿ ಬದುಕುವ ಪರಿಸ್ಥಿತಿ ಬಂದಿದೆ. ಪರಿಸರ ಬೇಳೆಸೋಣ ಎನ್ನುವ ಧ್ಯೇಯ ವಾಕ್ಯದೊಂದಿಗೆ ಪ್ರಸ್ತುತ ಶೈಕ್ಷಣಿಕ ವರ್ಷದ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದೀರಿ, ರೆಡ್‌ಕ್ರಾಸ್‌ನ ಧ್ಯೇಯ ವಾಕ್ಯದೊಂದಿಗೆ ಸಕ್ರೀಯವಾಗಿ ಅದರಲ್ಲಿ ತೊಡಗಿಸಿಕೊಂಡು ನಿಮ್ಮ ಭವಿಷ್ಯವನ್ನು ನೀವೇ ರೂಪಿಸಿಕೊಳ್ಳುವತ್ತ ಹೆಜ್ಜೆಯಿಡಿ ಎಂದರು.

ಮುಖ್ಯಅತಿಥಿಯಾಗಿ ಉಪಸ್ಥಿತರಿದ್ದ ನಿವೃತ್ತ ಮುಖ್ಯೋಪಾಧ್ಯಾಯ ಜತ್ತಪ್ಪ ಎ ಕೆ ಮಾತನಾಡಿ ಅಂತರ್ಜಲ ಕಡಿಮೆಯಾಗಲು ಭತ್ತದ ಕೃಷಿ ಕಡಿಮೆಯಾದದ್ದೇ ಕಾರಣ. ವಾತಾವರಣ ಬಿಸಿಯೇರಲು ನೀರಿನ ಮಟ್ಟ ಕೆಳ ಹೋದದ್ದು ಕಾರಣ, ಹಾಗಾಗಿ ನಮ್ಮ ಉಳಿವಿಗೆ ಭತ್ತದ ಕೃಷಿಯ ಅಗತ್ಯವಿದೆ. ಆ ನಿಟ್ಟಿನಲ್ಲಿ ಅದರ ಮಹತ್ವವನ್ನು ತಿಳಿಯಲು ಇಂತಹ ಕಾರ್ಯಕ್ರಮವನ್ನು ಆಯೋಜಿಸಿದುದು ಶ್ಲಾಘನೀಯ ಎಂದರು.

ಇನ್ನೋರ್ವ ಮುಖ್ಯ ಅತಿಥಿ ವರ್ತಕರ ಸಂಘದ ಅಧ್ಯಕ್ಷ ಪಿ ಬಿ ಸುಧಾಕರ ರೈ ಮಾತನಾಡಿ ಅನುಭವಕ್ಕಿಂತ ದೊಡ್ಡ ಶಿಕ್ಷಕ ಇನ್ನೊಬ್ಬನಿಲ್ಲ. ಭೂಮಿಯ ಫಲವತ್ತತೆಯನ್ನು ಉಳಿಸುವ ಭತ್ತದ ನಾಟಿಯ ಮಹತ್ವವನ್ನು ಇಂದಿನ ಜನತೆ ತಿಳಿಯಬೇಕಾದ ಅಗತ್ಯವಿದೆ. ಆ ನಿಟ್ಟಿನಲ್ಲಿ ಒಳ್ಳೆಯ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೀರಿ. ಒಳ್ಳೆಯವರಾಗಿರಿ ಸಮಾಜ ನಿಮ್ಮನ್ನು ಗುರುತಿಸುತ್ತದೆ. ನಿಮ್ಮ ಊರಿನ ಅಭಿವೃದ್ಧಿಯಲ್ಲಿ ಕೈ ಜೋಡಿಸಿ ಮನಸ್ಸಿಗೆ ಸಂತೋಷವಾಗುತ್ತದೆ ಎಂದರು.

ಕಾರ್ಯಕ್ರಮಾಧಿಕಾರಿ ಡಾ. ಅನುರಾಧಾ ಕುರುಂಜಿಯವರು ಪ್ರಾಸ್ತಾವಿಕವಾಗಿ ಮಾತನಾಡಿ ವ್ಯವಸಾಯದ ಮುಖತಃ ಅನುಭವ ಮಕ್ಕಳಿಗಾಗಲಿ, ಮುಂದಿನ ದಿನಗಳಲ್ಲಿ ನಾವು ತಿನ್ನುವ ಅನ್ನ ಎಲ್ಲಿಂದ ಎಂದಾಗ ಸೂಪರ್ ಮಾರ್ಕೆಟಿನತ್ತ ಕೈ ತೋರಿಸುವುದು ಬೇಡ ಎನ್ನುವ ನಿಟ್ಟಿನಲ್ಲಿ ಅದರ ಪರಿಚಯಕ್ಕಾಗಿ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಪವಿತ್ರ ಪ್ರಭಾಕರ ರೈ, ಪ್ರಾಪ್ತಿ ಪಿ ರೈ, ಘಟಕದ ಹಿರಿಯ ಸದಸ್ಯರಾದ ದೀಕ್ಷಿತ್, ಗಣೇಶ್, ತೇಜಸ್ ಉಪಸ್ಥಿತರಿದ್ದರು. ಮೌನ, ಕೃತಿ, ತೇಜಸ್ವಿನಿ ಪ್ರಾರ್ಥಿಸಿದ ಕಾರ್ಯಕ್ರಮದಲ್ಲಿ ಹವ್ಯಾ ಸ್ವಾಗತಿಸಿ, ಡಯಾನಾ ವಂದಿಸಿದರು. ಸ್ವಾತಿ ಕಾರ್ಯಕ್ರಮ ನಿರೂಪಿಸಿದರು.